# ಮೈಸೂರಿನಲ್ಲಿ ದಸರಾ ಹಬ್ಬ

ಸ್ವಾಮಿ ಆತ್ಮಜ್ಞಾನಂದ

*ಮೈಸೂರಿನ ದಸರಾಹಬ್ಬದ ಹಿನ್ನೆಲೆಯಲ್ಲಿ ಹಬ್ಬಗಳ ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಮಹತ್ವವನ್ನೂ ಹಾಗೂ ದೇವಿಪೂಜೆಯ ಪ್ರಾಮುಖ್ಯವನ್ನೂ ತಿಳಿಸಿಕೊಟ್ಟಿರುವ ಸ್ವಾಮಿ ಆತ್ಮಜ್ಞಾನಂದರು ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ*

## ಹಬ್ಬಗಳ ಮಹತ್ವ

ಹಬ್ಬವೆಂದೊಡನೆಯೇ ಮನೆಯಲ್ಲಿ ಎಲ್ಲರಿಗೂ ಸಂತಸ—ನಾಡಿಗೇ ಬೆಡಗು. ಆ ದಿನಗಳಲ್ಲಿ ಎಲ್ಲೆಡೆ ಉತ್ಸಾಹ, ಬಣ್ಣಗಳ ಮೇಳ, ಆನಂದದ ಪರಿಸರ ಕಂಡುಬರುತ್ತದೆ. ಮಾನವ ಸಾವಿರಾರು ವರ್ಷಗಳಿಂದ ಹಬ್ಬಗಳನ್ನು ಆಚರಿಸಿಕೊಂಡು ಬಂದಿದ್ದಾನೆ. ಎಲ್ಲ ಧರ್ಮಗಳೂ ಸಂಸ್ಕೃತಿಗಳೂ ಹಬ್ಬಕ್ಕೆ ಪ್ರಾಶಸ್ತ್ಯ ನೀಡಿವೆ. ಭಗವಂತನನ್ನು ನೆನೆಯಲು, ಅವನಿಗೆ ಪೂಜೆ ಪ್ರಾರ್ಥನೆಗಳನ್ನು ಸಲ್ಲಿಸಲು, ಅವನ ಸದ್ಗುಣಗಳನ್ನು ನೆನೆದು, ಭಕ್ತಿಯಲ್ಲಿ ಮಿಂದು ಕೃಪಾನ್ವಿತರಾಗಲು ಹಬ್ಬ ಸದವಕಾಶ. ದೈನಂದಿನ ಕಷ್ಟನಷ್ಟಗಳಿಂದ ಬಾಧಿತನಾಗಿ ಮಾನವ, ಹಬ್ಬಗಳಂದು ತನ್ನ ನೋವನ್ನು ಮರೆತು ಆನಂದವನ್ನು ಅನುಭವಿಸುತ್ತಾನೆ. ತನ್ನ ಮನೆಯವರ, ಸ್ನೇಹಿತರ ಆನಂದದಲ್ಲಿ ಪಾಲ್ಗೊಂಡು ವೈಯಕ್ತಿಕವಾಗಿಯೂ ಪ್ರಯೋಜನ ಪಡೆಯುತ್ತಾನೆ. ಪರಸ್ಪರ ವೈಮನಸ್ಯಗಳನ್ನು ಹೋಗಲಾಡಿಸಿ ಭಾವ ವಿನಿಮಯಕ್ಕೆ ಎಡೆಮಾಡಿಕೊಡುವುದರಿಂದ ಸಾಮಾಜಿಕವಾಗಿಯೂ ಹಬ್ಬಗಳ ಪಾತ್ರ ಮಹತ್ವವಾದದ್ದು. ನಾಡ ಹಿರಿಮೆಯನ್ನು ಸಾಂಸ್ಕೃತಿಕ ಘನತೆಯನ್ನು ಪ್ರತಿಬಿಂಬಿಸುವ ಹಬ್ಬಗಳು ಆಯಾ ದೇಶದ ಆರ್ಥಿಕ ಉನ್ನತಿ, ಸಾಮಾಜಿಕ ಭದ್ರತೆಯ ಪ್ರತೀಕ. ರಾಜ ಮಹಾರಾಜರುಗಳ ಕಾಲದಲ್ಲಿ ಇವು ಜನಸಾಮಾನ್ಯರಲ್ಲಿ ನೆಲೆನಿಂತಿದ್ದ ಶತ್ರುಗಳ ದಾಳಿ ಇತ್ಯಾದಿ ಭಯಗಳನ್ನು ಹೋಗಲಾಡಿಸುವಲ್ಲಿ ಯಶಸ್ವಿಯಾಗಿದ್ದವು. ಹಬ್ಬ ಯಾರಿಗೆ ತಾನೇ ಬೇಡ? ವ್ಯಾಪಾರಿಗೆ ಗಿರಾಕಿ ಹೆಚ್ಚಾಗುವ ಕಾಲ, ಮಕ್ಕಳಿಗೆ ತಿಂಡಿ ತೀರ್ಥಗಳ ಔತಣ ಮತ್ತು ತಂದೆ ತಾಯಿಯರಿಗೆ ಬೋನಸ್, ಉಡುಗೊರೆಗಳನ್ನು ಪಡೆಯುವ ಸದವಕಾಶ! ಗ್ರಾಮ್ಯ ಪ್ರದೇಶಗಳಲ್ಲಿ ವಿವಿಧ ಸ್ಪರ್ಧೆಗಳು, ಕಸರತ್ತುಗಳು, ಯಕ್ಷಗಾನ, ಬಯಲಾಟಗಳು ಈ ದಿನಗಳಂದು ನಡೆಯುವುದರಿಂದ ಹಬ್ಬಗಳು ಜಾನಪದ ಪರಂಪರೆಯ ವಾಹಕಗಳು.

## ದೇವಿಯ ಆರಾಧನೆ

ಭಾರತದಲ್ಲಿ ಶಕ್ತಿಯ ಆರಾಧನೆ ಬಹಳ ಹಿಂದಿನಿಂದ ನಡೆದುಬಂದಿದೆ. ಪ್ರಕೃತಿಯ ವಿಕೋಪಗಳಿಗೆ ಹೆದರಿ ಮನುಷ್ಯ ತನಗಿಂತ ಬಲವಂತನಾದ ದೇವರನ್ನು ಸೃಷ್ಟಿಸಿದ ಎಂದು ವಿಚಾರವಾದಿಗಳು ವಾದಿಸುತ್ತಾರೆ. ಸೃಷ್ಟಿಯನ್ನು; ಈ ಅದ್ಭುತವಾದ ಜಗತ್ತನ್ನು ನಿಯಂತ್ರಿಸುವ ಶಕ್ತಿ ಮತ್ತು ಮಾನವನಿಗೆ ಜಗತ್ತಿನ ಅರಿವನ್ನು ನೀಡುವ ಆ ಚೇತನವಸ್ತು ಒಂದೇ ಎಂಬುದನ್ನು ನಮ್ಮ ಋಷಿಗಳು ಕಂಡಿದ್ದರು, ಅನುಭವಿಸಿದ್ದರು. ಸ್ತ್ರೀರೂಪದಲ್ಲಿ ಭಗವಂತನ ಶಕ್ತಿಯನ್ನು ಕಂಡು ಆರಾಧಿಸಲು ಮಾನವ ಪ್ರಾರಂಭಿಸಿದ. ಮನುವೇ ಹೇಳಿರುವಂತೆ, "ಯಾವ ಗೃಹದಲ್ಲಿ ನಾರಿಯನ್ನು ಪೂಜ್ಯದೃಷ್ಟಿಯಿಂದ ನೋಡುತ್ತಾರೋ ಅಲ್ಲಿಗೆ ದೇವತಾಕುಲಗಳೆಲ್ಲ ಆನಂದದಿಂದ ಆಗಮಿಸುವರು. ಎಲ್ಲಿ ಅವರಿಗೆ ಗೌರವ ಸಲ್ಲುವುದಿಲ್ಲವೋ ಆ ಮನೆಯಲ್ಲಿ ಮಾಡಿದ ಕ್ರಿಯಾದಿಗಳೆಲ್ಲ ನಿಷ್ಪ್ರಯೋಜನ." "ಈ ರೀತಿಯಾಗಿ ಋಷಿಕುಲ ಜಗತ್ತಿನಲ್ಲಿ ಪ್ರಥಮಬಾರಿಗೆ ನಾರೀಮಹಿಮೆಯನ್ನು ಪ್ರಚಾರಮಾಡಿತು. ಸಕಾಮ ಜಗತ್ತು ಮುಗ್ಧವಾಗಿ ಅವರ ಪವಿತ್ರವಾಣಿಯನ್ನು ಆಲಿಸಿತು. ನಾರೀ ಪ್ರತೀಕವನ್ನು ಕಾಮಗಂಧಹೀನವಾದ ಮಾತೃದೃಷ್ಟಿಯಿಂದ ನೋಡಿದ ಆ ಮಹಾಋಷಿಗಳನ್ನು ಇತರರು ಅನುಸರಿಸಿದರು" ಎಂದು ಸ್ವಾಮಿ ಶಾರದಾನಂದರು ಭಾರತದಲ್ಲಿ ಶಕ್ತಿಪೂಜೆ ಎಂಬ ಕೃತಿಯಲ್ಲಿ ಬರೆಯುತ್ತಾರೆ. ಭಾರತದ ಇತಿಹಾಸದಲ್ಲಿ ಪೂಜ್ಯಸ್ಥಾನವನ್ನು ಪಡೆದಂತಹ ಸೀತಾ, ರಾಧಾ, ದಮಯಂತಿ, ಅರುಂಧತಿ, ಗಾರ್ಗಿಯರೆಲ್ಲ ಶಕ್ತಿಯ ಘನೀಭೂತ ರೂಪಗಳೇ. ತಾಯಿಯೆಂದು ಆ ಭಗವಚ್ಛಕ್ತಿಯನ್ನು ಕರೆದು, ಪ್ರಾರ್ಥಿಸಿ, ಪೂಜಿಸಿದಾಗ ಮಾನವ ಆಪ್ಯಾಯಮಾನವಾದ ಒಂದು ದಿವ್ಯ ಸಂಬಂಧವನ್ನು ಬೆಳೆಸಿಕೊಂಡು ಕೃತಾರ್ಥನಾಗುತ್ತಾನೆ. ಇಂದಿಗೂ ಪ್ರಚಲನೆಯಲ್ಲಿರುವ ಈ ಶಕ್ತಿಪೂಜೆಯ ಸಂಪ್ರದಾಯ ಅದರ ಪ್ರಸ್ತುತತೆ ಮತ್ತು ಪ್ರಯೋಜನವನ್ನು ಸಾದರ ಪಡಿಸುತ್ತದೆ.

ಶ್ರೀರಾಮಚಂದ್ರನು ರಾವಣನನ್ನು ಸಂಹಾರ ಮಾಡಲು ಯುದ್ಧಕ್ಕೆ ಹೊರಡುವ ಮುನ್ನ ದೇವಿಯನ್ನು ಪೂಜಿಸಿ ಯಶಸ್ಸನ್ನು ಕೋರಿದ್ದನು. ಪುರಾಣಗಳಲ್ಲಿ ಮಹಿಷಾಸುರ ಮರ್ದಿನಿಯ ಸ್ತೋತ್ರಗಳು ಮತ್ತು ಕಥೆಗಳು ವಿಪುಲವಾಗಿದ್ದು ಈ ಹಬ್ಬದ ಪ್ರಾಚೀನತೆಯನ್ನು ನಿರೂಪಿಸುತ್ತವೆ. ಬಾದಾಮಿ, ಮಹಾಬಲಿಪುರಂಗಳಲ್ಲಿ ದೇವಿಯ ಸಂಹಾರ

ಮೂರ್ತಿಗಳು ದೊರಕಿವೆ. ಹನ್ನೊಂದನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿಯಿತ್ತಿದ್ದ ಅಲ್‌ಬರೂನಿ ತನ್ನ ದಾಖಲೆಗಳಲ್ಲಿ ಈ ಹಬ್ಬಗಳ ಸುಂದರ ವರ್ಣನೆಯನ್ನು ನೀಡಿದ್ದಾನೆ.

## ನವರಾತ್ರಿ

ಒಂಬತ್ತು ದಿನಗಳ ಕಾಲ ನವರಾತ್ರಿಯ ಹಬ್ಬ ನಡೆಯುತ್ತಾದ್ದರಿಂದ ನವರಾತ್ರಿ ಎಂದು ಹೆಸರು ರೂಢಿಯಲ್ಲಿ ಬಂತು. ರಾತ್ರಿಯ ವೇಳೆಯಲ್ಲೆ ಪೂಜೆಗಳು ನಡೆಯುತ್ತಿದ್ದವು. ನವರಾತ್ರಿ ಹಬ್ಬವು ಭಾರತಾದ್ಯಂತ ದಸರಾ, ದಶಹರಾ, ದಶೆರಾ ಎಂದು ಆಚರಣೆಯಲ್ಲಿದ್ದರೂ, ಮೈಸೂರಿನಲ್ಲಿ ಅದನ್ನು ಬಹುಕಾಲದಿಂದ ವೈಭವದಿಂದ ಆಚರಿಸಲಾಗುತ್ತಿದೆ. ಹಿಂದೂ ಧರ್ಮವನ್ನು ಮುಸ್ಲಿಮರ ಧಾಳಿಯಿಂದ ರಕ್ಷಿಸಲು ಮತ್ತು ಭಾರತದ ದಿವ್ಯಸಂಸ್ಕೃತಿಯನ್ನು ರಕ್ಷಿಸಲು ೧೪ನೆಯ ಶತಮಾನದಲ್ಲಿ ಉದ್ಭವಿಸಿದ ವಿಜಯನಗರ ಸಾಮ್ರಾಜ್ಯವು ಪ್ರಥಮಬಾರಿಗೆ ಈ ಹಬ್ಬವನ್ನು ನಾಡಹಬ್ಬವನ್ನಾಗಿ ವಿಜೃಂಭಣೆಯಿಂದ ಆಚರಿಸಿತು. ತನ್ಮೂಲಕ ಸಾಮಾನ್ಯ ಜನರಿಗೆ ಧರ್ಮದಲ್ಲಿ ಮತ್ತು ಸಾಮಾಜಿಕ ಭದ್ರತೆಯಲ್ಲಿ ಶ್ರದ್ಧೆ ಮೂಡಿಸಿತು.

ಕರ್ನಾಟಕದಲ್ಲಿ ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿಗಳಾದ ಮೈಸೂರು ಒಡೆಯರು ನವರಾತ್ರಿ ಉತ್ಸವದ ಪರಂಪರೆಯನ್ನು ಮುಂದುವರೆಸಿಕೊಂಡು ಬಂದರು. ೧೬೧೦ ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ ಸಾಮಂತರು ನವರಾತ್ರಿಯ ಉತ್ಸವಗಳನ್ನು ಮುಂದುವರೆಸುವುದರ ಮೂಲಕ ಜನಸಾಮಾನ್ಯರ ಮನ್ನಣೆ ಮತ್ತು ವಿಶ್ವಾಸವನ್ನು ಗಳಿಸಲು ಯತ್ನಿಸಿದರು. ರಾಜಒಡೆಯರು ಪ್ರಥಮ ಬಾರಿ ಈ ಹಬ್ಬವನ್ನು ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣದಲ್ಲಿ ವಿಜೃಂಭಣೆಯಿಂದ ಆಚರಿಸಿದರು. ಹೈದರ್‌ಅಲಿ ಮತ್ತು ಟಿಪ್ಪೂಸುಲ್ತಾನ್ ಅವರ ಕಾಲದಲ್ಲೂ (೧೭೬೧-೧೭೯೯) ಈ ಹಬ್ಬವು ನಿರಾತಂಕವಾಗಿ ನಡೆಯಿತು. ೧೭೯೯ರಲ್ಲಿ ಟಿಪ್ಪೂಸುಲ್ತಾನನ ಮರಣಾನಂತರ ಮೈಸೂರನ್ನು ಆಂಗ್ಲಸರ್ಕಾರವು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಒಪ್ಪಿಸಿತು. ಆಗ ಮತ್ತಷ್ಟು ವೈಭವದಿಂದ ಆಚರಣೆಗೆ ಬಂತು ನವರಾತ್ರಿ. ಬ್ರಿಟಿಷ್ ರಾಜ್ಯದ ಅಧಿಕಾರಿಗಳಿಗಾಗಿ ದರ್ಬಾರನ್ನು ಪ್ರಾರಂಭಿಸಲಾಯಿತು ಮತ್ತು ಜನಸಾಮಾನ್ಯರ ಸಹಭಾಗಿತ್ವಕ್ಕೆ ಅವಕಾಶ ಮಾಡಲಾಯಿತು. ನಾಲ್ವಡಿ ಕೃಷ್ಣರಾಜ ಒಡೆಯರ(೧೯೦೨-೧೯೪೦)ರ ಕಾಲದಲ್ಲಿ ದಸರಾದ ವೈಭವ ಅತ್ಯುನ್ನತವಾಗಿತ್ತು.

ಮೈಸೂರಿನ ಅರಮನೆಯು ಕೆತ್ತನೆ ಮತ್ತು ವಜ್ರಖಚಿತ ಗೋಡೆಗಳಿಗೆ ಪ್ರಸಿದ್ಧವಾಗಿತ್ತು. ಸ್ವಾಮಿ ವಿವೇಕಾನಂದರು ತಮ್ಮ ಪರ್ಯಟನೆಯ ಕಾಲದಲ್ಲಿ ಇದೇ ಅರಮನೆಯಲ್ಲಿ ರಾಜರನ್ನು ಭೇಟಿಯಾಗಿದ್ದರು. ದುರದೃಷ್ಟವಶಾತ್ ೧೮೯೭ ರಲ್ಲಿ ಅಗ್ನಿದುರಂತದಲ್ಲಿ ಅರಮನೆಯ ಬಹುತೇಕ ಭಾಗ ಭಸ್ಮವಾಯಿತು. ೧೯೧೨ರಲ್ಲಿ ಹೊಸ ಅರಮನೆಯು ನಿರ್ಮಾಣವಾಯಿತು. ವಿದ್ಯುತ್ ದೀಪ ಹಾಗೂ ಸುಂದರ ಕಲಾಕೃತಿಗಳಿಂದ ಸುಸಜ್ಜಿತವಾಗಿ ಅರಮನೆ ವೈಭವದ ಪ್ರತಿರೂಪವಾಯಿತು. ೧೯೪೭ರಲ್ಲಿ ಭಾರತ ಸರ್ಕಾರವು ಎಲ್ಲ ಪ್ರತ್ಯೇಕ ರಾಜ್ಯಗಳನ್ನೂ ರದ್ದುಮಾಡಿ ರಾಷ್ಟ್ರೀಕರಣವನ್ನು ಕೈಗೊಂಡಾಗ, ನವರಾತ್ರಿಯ ಉತ್ಸವಕ್ಕೆ ಭಂಗಬಂದಿತು. ಶ್ರೀ ಜಯಚಾಮರಾಜೇಂದ್ರ ಒಡೆಯರು ತಮ್ಮ ಖರ್ಚಿನಲ್ಲಿ ಕೆಲವುಕಾಲ ಅದನ್ನು ನಡೆಸಿಕೊಂಡು ಬಂದರಾದರೂ ೧೯೭೪ರಲ್ಲಿ ಅವರ ದೇಹಾಂತ್ಯದೊಂದಿಗೆ ಮತ್ತೆ ಉತ್ಸವಗಳು ಸ್ಥಗಿತಗೊಂಡವು. ಕರ್ನಾಟಕ ಸರ್ಕಾರವು ಇದನ್ನು ನಾಡಹಬ್ಬವನ್ನಾಗಿ ಆಚರಿಸಲು ಮುಂದೆಬಂದು, ಪರಂಪರೆಯನ್ನು ಉಳಿಸಲು ಪ್ರಯತ್ನಿಸಿದೆ. ಆದರೂ ಆ ಗತಕಾಲದ ವೈಭವವಾಗಲೀ, ಶೋಭೆಯಾಗಲೀ ಇಂದಿಲ್ಲ. ಆ ಹೊಳಪಿನ ಶಿಲ್ಕು ಮಾತ್ರ ಉಳಿದುಕೊಂಡಿದೆ ಇಂದು.

## ಪೂಜಾ ವಿಧಿಗಳು

ದೇವಿಯನ್ನು ನವರಾತ್ರಿ ಸಮಯದಲ್ಲಿ ವಿಶೇಷವಾಗಿ ಆರಾಧಿಸಿ ಶೈಲಪುತ್ರೀ, ಬ್ರಹ್ಮಚಾರಿಣೀ, ಚಂದ್ರಘಂಟಾ, ಸ್ಕಂದಮಾತಾ, ಕಾತ್ಯಾಯಿನೀ, ಮಹಾಗೌರೀ ಮತ್ತು ಸಿದ್ಧಿದಾ ಎಂದು ಪೂಜಿಸಲಾಗುತ್ತಿತ್ತು. ರಾಜರು ಸ್ನಾನಾದಿಗಳನ್ನು ಮುಗಿಸಿ, ಶುಚಿಯಾಗಿ ಮಡಿಬಟ್ಟೆಗಳನ್ನು ಧರಿಸಿ ಕಂಕಣಬದ್ಧರಾಗಿ, ಕುಲದೇವತೆಯಾದ ಚಾಮುಂಡಿದೇವಿಯನ್ನು ಅರಮನೆಯಲ್ಲಿ ಪ್ರತಿಷ್ಠಾಪಿಸಿ ಗಣೇಶನ ಪೂಜೆಯನ್ನು ಮಾಡುತ್ತಿದ್ದರು. ನಂತರ ದರ್ಬಾರಿಗೆ ಬಂದು, ಸಿಂಹಾಸನ ಮತ್ತು ಖಡ್ಗಗಳಿಗೆ ಪೂಜೆಸಲ್ಲಿಸಿ, ಪ್ರದಕ್ಷಿಣೆಮಾಡಿ, ಸಿಂಹಾಸನದಲ್ಲಿ ಮಂಡಿಸಿದಾಗ ಸಾಮಂತರು, ರಾಜ್ಯದ ಪ್ರಮುಖರು, ಅತಿಥಿಗಳು, ಮಂತ್ರಿಗಳು ಹಾಗೂ ಜನಸಾಮಾನ್ಯರು ತಮ್ಮ ತಮ್ಮ ಕಾಣಿಕೆ ಮರ್ಯಾದೆಗಳನ್ನು ಸಲ್ಲಿಸಿ ಗೌರವ ವ್ಯಕ್ತಪಡಿಸುತ್ತಿದ್ದರು. ಪಟ್ಟದಾನೆ ಮತ್ತು ಅಶ್ವಗಳಿಗೆ ಅಭಿಷೇಕ, ಪೂಜೆ ಹಾಗೂ ಅಲಂಕಾರ ಮಾಡಿ, ದೇವಸ್ಥಾನಾದಿಗಳ ಪ್ರಸಾದವನ್ನು ಸ್ವೀಕರಿಸಿದ ನಂತರ ಸಭಿಕರೆಲ್ಲ ಹಿಂತಿರುಗುತ್ತಿದ್ದರು. ಆಗ ಮಹಾರಾಣಿಯರು ಮತ್ತಿತರ ರಾಜಮನೆತನದ ಸ್ತ್ರೀಯರು ಬಂದು ರಾಜನಿಗೆ ಗೌರವ ಸೂಚಿಸಿ ಶುಭವನ್ನು ಕೋರುತ್ತಿದ್ದರು. ಸಂಜೆ ದರ್ಬಾರಿನ ಬೆಡಗಿನೊಂದಿಗೆ ಬಗೆ ಬಗೆಯ ಸ್ಪರ್ಧೆಗಳು, ಕುಸ್ತಿಪಂದ್ಯಗಳು, ಪಟಾಕಿ-ಬಿರುಸುಬಾಣಗಳ ಪ್ರದರ್ಶನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ದರ್ಬಾರ್ ಇತ್ಯಾದಿಗಳು ಹೊರಾಂಗಣದಲ್ಲಿ ನಡೆಯುತ್ತಿದ್ದವು. ಸರಸ್ವತಿ ದೇವಿಯನ್ನು ಸಪ್ತಮಿಯಂದು ಮತ್ತು ಮಹಿಷಾಸುರಮರ್ದಿನಿಯನ್ನು ಅಷ್ಟಮಿಯಂದು ಪೂಜಿಸಿ ನವಮಿಯಂದು ಖಡ್ಗಾದಿ ಅಸ್ತ್ರಗಳ ಪೂಜೆ ನಡೆಯುತ್ತಿತ್ತು. ಅಮಲದೇವತೆ ಚಂಡೀದೇವಿಯು

ಪೂಜೆಯು ಮಾಡಿ, ಹೋಮ-ಪೂರ್ಣಾಹುತಿಗಳೊಂದಿಗೆ ಮುಕ್ತಾಯಗೊಳ್ಳುತ್ತಿತ್ತು. ಪ್ರತಿದಿನವೂ ಚಾಮುಂಡಿ ದೇವಿಯ ವಿಶೇಷಪೂಜೆಯನ್ನು ಬೆಟ್ಟದಲ್ಲೂ ಆಚರಿಸಿ, ವಿಶೇಷ ಅಲಂಕಾರಾದಿಗಳನ್ನು ಮಾಡುತ್ತಿದ್ದರು. ಇಂದು ಇಷ್ಟೊಂದು ವಿಸ್ತಾರವಾಗಿ ದರ್ಬಾರ್, ಪೂಜಾದಿಗಳು ನಡೆಯದಿದ್ದರೂ ಅಂಬಾರಿಯಲ್ಲಿ ಚಾಮುಂಡಿಯನ್ನು ಕುಳ್ಳಿರಿಸಿ ಮೆರವಣಿಗೆ ಸಾಗುತ್ತಿದೆ.

**ದಸರ ಮೆರವಣಿಗೆ**

ವಿಜಯದಶಮಿಯಂದು ಮುಕ್ತಾಯಗೊಳ್ಳುವುದು ನವರಾತ್ರಿ. ಮೈಸೂರಿನ ನವರಾತ್ರಿಗೆ ಪ್ರಾಶಸ್ತ್ಯ ಮತ್ತು ಬೆಡಗನ್ನು ನೀಡಿರುವುದೇ ದಶಮಿಯಂದು ನಡೆಯುವ ವೈಭವಯುತ ಮೆರವಣಿಗೆ ಹಾಗೂ ರತ್ನಖಚಿತ ಸುವರ್ಣಸಿಂಹಾಸನದ ಪ್ರದರ್ಶನ. ಈ ಸಿಂಹಾಸನಕ್ಕೆ ಐತಿಹಾಸಿಕ ಹಾಗೂ ಪೌರಾಣಿಕ ಮಹತ್ವ ಇದೆ. ಇದನ್ನು ಧರ್ಮರಾಜನು ಉಪಯೋಗಿಸಿದ್ದನೆಂದೂ ವಿದ್ಯಾರಣ್ಯಮುನಿಗಳು ಇದನ್ನು ಆವಿಷ್ಕರಿಸಿ ವಿಜಯನಗರದ ರಾಜರಿಗೆ ನೀಡಿದ್ದು, ನಂತರ ಅವರಿಂದ ಮೈಸೂರ ಒಡೆಯರು ಪಡೆದರೆಂದೂ ಪ್ರತೀತಿ. ರಾಜ ಈ ಸಿಂಹಾಸನದಲ್ಲಿ ಕುಳಿತು, ಸುಂದರವಾಗಿ ಅಲಂಕೃತವಾದ ಆನೆಯ ಅಂಬಾರಿಯ ಮೇಲೆ ಹೊರಟನೆಂದರೆ, ೨೧ ಬಂದೂಕುಗಳು ಮದ್ದನ್ನು ಹಾರಿಸಿ ಗೌರವ ಸೂಚಿಸುತ್ತಿದ್ದವು. ರಸ್ತೆಗಳ ಇಬ್ಬದಿಯಲ್ಲೂ ಜನರು ಕಿಕ್ಕಿರಿದು ಮೆರವಣಿಗೆಯನ್ನು ವೀಕ್ಷಿಸುತ್ತಿದ್ದರು. ಅಶ್ವಾರೂಢ ಸೈನಿಕರು, ವಾದ್ಯವೃಂದಗಳನ್ನು ನುಡಿಸುವ ರಕ್ಷಕರು, ಆನೆಗಳ ಪಡೆ, ಮಂತ್ರಿಗಳೇ ಮುಂತಾದ ಪ್ರಮುಖರ ದರ್ಶನವಾಗುತ್ತಿತ್ತು ಜನರಿಗೆ. ರಾಜರು ಬನ್ನಿಮಂಟಪಕ್ಕೆ ತೆರಳಿ, ಶಮೀ ವೃಕ್ಷವನ್ನು ಪೂಜಿಸಿ, ಯಶಸ್ಸಿಗಾಗಿ ಪ್ರಾರ್ಥಿಸಿ ಹಿಂತಿರುಗಿ ಬರುತ್ತಿದ್ದರು. ಪಾಂಡವರು ಅಜ್ಞಾತವಾಸದಲ್ಲಿದ್ದಾಗ ಅವರ ಅಸ್ತ್ರಗಳನ್ನು ಶಮೀವೃಕ್ಷದಲ್ಲಿ ಅಡಗಿಸಿಟ್ಟಿದ್ದರು. ಅರ್ಜುನನು ಉತ್ತರಕುಮಾರನ ಜೊತೆಯಲ್ಲಿ ಬೃಹನ್ನಳೆಯಾಗಿ ಕೌರವರ ವಿರುದ್ಧ ಯುದ್ಧಕ್ಕೆ ಹೊರಟಾಗ ಶಮೀವೃಕ್ಷಕ್ಕೆ ನಮಿಸಿ ತನ್ನ ಗಾಂಡೀವ ಧನಸ್ಸನ್ನು ಪಡೆದುಕೊಂಡು ವಿಜಯಶಾಲಿಯಾದನು. ಅರಸರು ಈ ಪದ್ಧತಿಯನ್ನು ಉಳಿಸಿಕೊಂಡಿದ್ದರು. ಅರಮನೆಗೆ ಹಿಂತಿರುಗಿ ರಾಜರು ವಿಶಿಷ್ಟ ಸೇವೆ ಸಲ್ಲಿಸಿದ ಅಧಿಕಾರಿಗಳಿಗೆ ಬಿರುದು ಸನ್ಮಾನಗಳನ್ನು ನೀಡಿ ಸತ್ಕರಿಸುತ್ತಿದ್ದರು. ದೇವಸ್ಥಾನಗಳಿಗೆ, ಅರ್ಚಕರಿಗೆ ಕೂಡ ದೇಣಿಗೆ ಮತ್ತು ಉಡುಗೊರೆಗಳನ್ನು ಕಳುಹಿಸಲಾಗುತ್ತಿತ್ತು. ಇದು ರಾಜರ ಕಾಲದಲ್ಲಿದ್ದ ಆಚರಣೆಗಳ ಒಂದು ಸಂಕ್ಷಿಪ್ತ ಚಿತ್ರ



*ದಸರಾ ಮೆರವಣಿಗೆಯ ದೃಶ್ಯ*

**ಕೊನೆಯ ಮಾತು**

ಪರ್ಯಾಲೋಚಿಸಿದಲ್ಲಿ ಗ್ರಾಮದೇವತೆಯ ಮತ್ತು ಕೃಷಿಯ ಉಪಕರಣಗಳ ಪೂಜೆ, ಪ್ರಾಣಿಬಲಿ ಮುಂತಾದವುಗಳನ್ನು ಸಂಸ್ಕರಿಸಿ, ವೈದಿಕ ಪರಿಮಿತಿಯೊಳಗೆ ಸ್ವೀಕರಿಸಿರುವುದು ಕಂಡುಬರುವುದು. ನೇಗಿಲು, ಪಿಕಾಸಿಗಳ ಪೂಜೆ, ಶಮೀ ವೃಕ್ಷದ ಆರಾಧನೆ ಇವೆಲ್ಲ ಪ್ರಕೃತಿಯೊಂದಿಗೆ ಮಾನವನಿಗೆ ಇದ್ದ ತಾದಾತ್ಮ್ಯವನ್ನು ಸೂಚಿಸುತ್ತವೆ. ಆಯುಧಗಳ ಪೂಜೆ, ಸೈನ್ಯದ ಪ್ರದರ್ಶನ, ಆನೆ, ಕುದುರೆಗಳ ಮೆರವಣಿಗೆ ಇವೆಲ್ಲ ಯುದ್ಧಸನ್ನಾಹದ ವೀರರಸದ ಪ್ರತೀಕ. ಭಕ್ತಿರಸದ ಸಮರಸವನ್ನೂ ಕಾಣುತ್ತೇವೆ. ಧರ್ಮಾಧರ್ಮಗಳ ನಡುವೆ ನಡೆಯುತ್ತಿರುವ ನಿರಂತರ ಸಮರದಲ್ಲಿ ಸತ್ಯ, ನೀತಿ, ಸದ್ಗುಣಗಳಿಗೇ ಯಶಸ್ಸು ಎಂಬುದನ್ನು ಈ ಹಬ್ಬಗಳು ನಮಗೆ ಮತ್ತೆ ಮತ್ತೆ ಮನವರಿಕೆ ಮಾಡಿಕೊಡುತ್ತಾ ಸತ್ಪಥದಲ್ಲಿ ನಡೆಯುವಂತೆ ಪ್ರೇರೇಪಿಸುತ್ತವೆ. ಎಲ್ಲರೂ ಭಾಗವಹಿಸಲು ಅವಕಾಶ ಕಲ್ಪಿಸಿರುವುದರಿಂದ ಜಾತಿ-ಮತಗಳ ಭೇದಗಳ ಕಟ್ಟಳೆಗಳನ್ನೂ ಶಿಥಿಲಗೊಳಿಸುವಲ್ಲಿ ಸಹಕಾರಿಯಾಗಿದೆ. ಕರ್ನಾಟಕ ಸರ್ಕಾರವು ನವರಾತ್ರಿಯನ್ನು ರಾಜ್ಯಹಬ್ಬವನ್ನಾಗಿ ಪರಿಗಣಿಸುವುದರ ಮೂಲಕ ನಾಡಿನ ಸಾಂಸ್ಕೃತಿಕ ವೈವಿಧ್ಯ ಮತ್ತು ಹೆಗ್ಗಳಿಕೆಯನ್ನು ಪ್ರದರ್ಶಿಸುವಲ್ಲಿ ಯಶಸ್ವಿಯಾಗಿದೆ. ಇಂತಹ ಸಾಂಸ್ಕೃತಿಕ, ಆಧ್ಯಾತ್ಮಿಕ ಹಬ್ಬಗಳ ಮಹತ್ವ ಕಾಲಸಮ್ಮತವಾಗಿದ್ದು, ಸಮಾಜದಲ್ಲಿ ಉನ್ನತ ಮೌಲ್ಯಗಳನ್ನು ಸ್ಥಿರವಾಗಿ ನಿಲ್ಲಿಸುವಲ್ಲಿ ಗಮನಾರ್ಹ ಪಾತ್ರ ವಹಿಸುತ್ತವೆ. ಮಾನವನನ್ನು ಪಾಶವೀ ವೃತ್ತಿಗಳಿಂದ ದೈವತ್ವದೆಡೆಗೆ ಕರೆದೊಯ್ಯುವಲ್ಲಿ ಇವು ಸಹಾಯಕವಾದ್ದರಿಂದ ಅನಿವಾರ್ಯ. ನವರಾತ್ರಿಯ ನಿಜವಾದ ಸತ್ವ ಇದು. ಇದನ್ನು ಅರಿತು ಮಾನವ ಸಾಫಲ್ಯವನ್ನು ಪಡೆಯುವಂತೆ ಆಗಲಿ ಎಂದು ಹಾರೈಸೋಣವೇ?

*